ಒಂದು ತಾಸಿನ ಹಿಂದೆ ಅದೇ ಕುಡುಗೋಲಿನಿಂದ ಆತ ದನಗಳಿಗೆ ಮೇವು ಮಾಡಿಕೊಂಡು ಬಂದಿದ್ದ. ಜೋಳದ ತೆನೆಯ ದಂಟು ಎಷ್ಟು ದಪ್ಪಗಾಗಿದೆ, ತೆನೆ ಎಷ್ಟೆಲ್ಲ ಕಾಳು ಹಿಡಿದಿದೆಯೆಂದು ಅನಸವ್ವನಿಗೆ ತೋರಿಸಿದ್ದ. ಅವನು ಜೋಳದ ದಂಟಿನ ಹೊರೆ ಒಗೆದದ್ದನ್ನು ನೋಡಿದ್ದಾಗಿಯೂ ಅನಸವ್ವಳೊಂದಿಗೆ ಆತ ಮಾತಾಡಿದ್ದನ್ನು ಕೇಳಿಸಿಕೊಂಡಿದ್ದಾಗಿಯೂ ಹೊಟೇಲಿನಲ್ಲಿ ಇದ್ದ ಸಂಗಪ್ಪ, ರುದ್ರಗೌಡ, ಅಬಿದ್ ಪೊಲೀಸರೆದುರು ಹೇಳಿಕೆ ಕೊಟ್ಟರು. ಅಷ್ಟೊತ್ತಿಗೆ ಕಂಡಕ್ಟರನ ಊರು ಹೊಸೂರಿನ ಒಂದಷ್ಟು ಮಂದಿ ಹೊಂಗಲದ ಪೋಲಿಸ್ ಸ್ಟೇಷನ್‌ಗೆ ಮುತ್ತಿಗೆ ಹಾಕಿ ಸುಭಾಸನನ್ನು ಕೊಲ್ಲಲಿಕ್ಕೆ ಪ್ರಭಾವ ಬೀರಿದ ವ್ಯಕ್ತಿಗಳ ಬಂಧನವಾಗಬೇಕೆಂದು ಪಟ್ಟು ಹಿಡಿದರು. ಸುಭಾಸನ ಸಾವಿಗೆ ಅನುಸೂಯಾ ಕಾರಣ ಎಂದು ಘೋಷಣೆ ಕೂಗತೊಡಗಿದರು. ಪೋಲಿಸರ ಮೇಲೆಯೇ ಏರಿಹೋದರು. ಪೋಲಿಸರು ಪರಿಸ್ಥಿತಿಯನ್ನು ತಿಳಿಗೊಳಿಸಿದರು.

‘ನಮಗ ಯಾರ ಮ್ಯಾಲ ಸಂಶಯ ಐತ್ಯೋ ಅವರನ್ನ ಹಿಡಿಕೊಂಡು ಬಂದು ವಿಚಾರಣೆ ಮಾಡೋದು ನಮ್ಮ ಕರ್ತವ್ಯ ಐತಿ. ನೋಡ್ರಿ, ನೀವು ಹೇಳೋದಕ್ಕಿಂತ ಮೊದಲೇ ಅನಸವ್ವಳನ್ನ ಅರೆಸ್ಟ್ ಮಾಡೇವಿ. ಹಂಗೆ ಅನಸವ್ವಳ ಗಂಡ ದೇವಪ್ಪ, ದುಂಡಪ್ಪ, ನಾಗಪ್ಪ ಎಲ್ಲಾರನ್ನೂ ವಿಚಾರಣೆ ಮಾಡ್ತೇವಿ.’ ಹೊಸೂರಿನ ಮಂದಿ ಕಂಡಕ್ಟರನ ಪಾರ್ಥಿವ ಶರೀರವನ್ನು ತೆಗೆದುಕೊಂಡು ಶವಸಂಸ್ಕಾರ ಮಾಡಲು ಊರ ಕಡೆ ನಡೆದರು. ಇದರಲ್ಲಿ ಬರೀ ದುರ್ಗಪ್ಪ ಮಾತ್ರವಲ್ಲ, ಬೇರೆಯವರೂ ಇದ್ದಿರಬಹುದೆಂಬ ಸುದ್ದಿ ಹಬ್ಬಿದೊಡನೆ ಜನರ ಜಂಘಾಬಲವೆ ಉಡುಗಿತು. ಬಡಬಡಾ ಬಾಗಿಲು ಮುಚ್ಚಿಕೊಂಡರು. ಏನಾದರೂ ಅಪ್ಪಿ ತಪ್ಪಿ ಮಾತಾಡಿದರೆ ಖಾಕಿ ಅಂಗಿಯವರು ಕೋಳ ಹಾಕಿ ಎಳೆದೊಯ್ಯುತ್ತಾರೆಂದು ವಿಪರೀತವೆನಿಸುವ ಮೌನಕ್ಕೆ ಶರಣಾದರು. ಇದು ಎಂತಹ ಮೌನವೆಂದರೆ ಅವರನ್ನು ಒಳಗೊಳಗೆ ಸಾಯಿಸುವ, ಚಿಂತೆಗೀಡುಮಾಡುವ ಮೌನ. ಇದೇನು ದುರಂತವೋ, ದುರ್ಘಟನೆಯೋ, ಆಕಸ್ಮಿಕವೋ, ಸೇಡಿನ ಕೊಲೆಯೋ, ತಮ್ಮ ರಹಸ್ಯವೇನಾದರೂ ಬಯಲಾದೀತೆಂದು ಮಾಡಿರುವ ನಿರ್ದಯ ಹತ್ಯೆಯೋ? ಯಾರಿಗೆ ಗೊತ್ತು? ಇದು ಪೂರ್ವ ಯೋಜಿತವಾಗಿತ್ತೆ?



ನಂಬಿಕೆಯ ನೂಲು

■ ಬಸು ಬೇವಿನಗಿಡದ

ಕಲೆ: ಎಚ್‌ಎಸ್ ಮೋನಪ್ಪ

# ಒಂದು ಕೊಲೆಯ ಸುತ್ತ...